## ಅಂಗಡಿಯಲ್ಲೇ ಇದ್ದೇನೆ...



ಕುಡುಕ ತಿಪ್ಪೇಶಿ ನಡುರಾತ್ರಿಯಲ್ಲಿ ಯಾವುದಾದ್ರೂ ಬಾರ್ ತೆರೆದಿದೆಯೇ ಎಂದು ನೋಡುತ್ತಿದ್ದ. ಎಲ್ಲಾ ಅಂಗಡಿಗಳೂ ಮುಚ್ಚಿದ್ದವು. ಒಂದು ಅಂಗಡಿಯ ಬೋರ್ಡಿನ ಮೇಲೆ ಮಾಲೀಕನ ಫೋನ್ ನಂಬರ್ ಬರೆದಿತ್ತು. ಕರೆ ಮಾಡಿದ, 'ಸಾರ್, ನಾನು ತಿಪ್ಪೇಶಿ ಅಂತ ಸಾರ್, ನಿಮ್ಮ ಗಿರಾಕಿ, ಬೇಗ ಬಾರ್ ಹತ್ರ ಬನ್ನಿ ಸಾರ್, ಅಂಗಡಿ ಬಾಗಿಲು ತೆರೆಯಿರಿ' ಎಂದು ಅಂಗಲಾಚಿದ. 'ಈಗ ಮಧ್ಯರಾತ್ರಿ, ಬೆಳಿಗ್ಗೆ ಬಾ' ಎಂದ ಮಾಲೀಕ. 'ನಾನು ಅಂಗಡಿಯೊಳಗೇ ಸಿಕ್ಕಿಹಾಕಿಕೊಂಡಿದ್ದೀನಿ ಸಾರ್, ಬೇಗ ಬನ್ನಿ' ಎಂದ. ತಕ್ಷಣ ಅಂಗಡಿಗೆ ಧಾವಿಸಿದ ಮಾಲೀಕ ಬಾಗಿಲು ತೆರೆದು ದೀಪ ಹಾಕಿ ತಿಪ್ಪೇಶಿಯನ್ನು ಹುಡುಕಹತ್ತಿದ. ತಕ್ಷಣ ಒಳಗೆ ಜಿಗಿದು ಬಂದ ತಿಪ್ಪೇಸಿ, 'ನಾನು ಬಾರ್‌ನ ಹೊರಗಿದ್ದೆ ಸಾರ್, ಹೇಗೂ ಇಲ್ಲಿವರೆಗೂ ಬಂದಿದ್ದೀರಿ. ಒಂದು ರಮ್ ಬಾಟಲ್ ಕೊಡಿ ಸಾರ್' ಅಂದ.

**ಕೆ.ಜಿ. ಭದ್ರಣ್ಣವರ**

---



## ಇಡೋದೆಲ್ಲಿ?

ಶೀಲಾ ಯೋಚನಾ ಮಗ್ನಳಾಗಿ ಕುಳಿತಿರೋದು ನೋಡಿದ ಪ್ರಸನ್ನ ಕೇಳಿದ, 'ಏನೋ ಯೋಚನೆ ಮಾಡ್ತಿರೋ ಹಾಗಿದೆ?' ಶೀಲಾ ಹೇಳಿದ್ಲು, 'ಹೊಸ ವಸ್ತುವೊಂದರ ಸಂಶೋಧನೆಯಲ್ಲಿ ತೊಡಗಿದ್ದೇನೆ.' ಪ್ರಸನ್ನ ಕೇಳಿದ, 'ಯಾವುದು ಅಂತಹ ವಸ್ತು?' ಶೀಲಾ ಮತ್ತೆ ಹೇಳಿದಳು, 'ಎಲ್ಲವನ್ನೂ ಕರಗಿಸುವ ವಸ್ತುವೊಂದರ ಸಂಶೋಧನೆಯಲ್ಲಿ ತೊಡಗಿದ್ದೇನೆ'. ಬಹಳ ಹೊತ್ತು ಯೋಚಿಸಿದವನೇ ಪ್ರಸನ್ನ ಮತ್ತೆ ಕೇಳಿದ, 'ಅದು ಸರಿ, ನೀನು ಆ ವಸ್ತುವನ್ನು ಎಲ್ಲಿಡ್ತಿ ಮತ್ತೆ?!'

**ತೈರೊಳ್ಳಿ ಮಂಜುನಾಥ, ಉಡುಪ**